ಓದುವ ಸಂದರ್ಭದಲ್ಲಿ ಅಮ್ಮಂದಿರು ಹೇಳುವಂತೆ ಕಟ್ಟುನಿಟ್ಟಿನಿಂದ ಇರುವುದೇ ಒಳಿತು. ನನ್ನಮ್ಮ ಕಟ್ಟುನಿಟ್ಟಾಗಿ ಇದ್ದಾಗ ನನಗೆ ಬೇಸರವಾಗುತ್ತಿತ್ತು. ಆದರೆ ಈಗ ಅಮ್ಮ ಮಾಡಿದ್ದು ಸರಿ ಎನಿಸುತ್ತದೆ. ನಾಳೆ ನಾನೂ ನನ್ನ ಅಮ್ಮನ ದಾರಿಯನ್ನೇ ಅನುಸರಿಸುತ್ತೇನೆ' ಎನ್ನುವ ಪ್ರೌಢತೆ ಸಂಯುಕ್ತಾ ಅವರದು.

ಮಗಳ ಬಗ್ಗೆ ಸುಧಾ ಬೆಳವಾಡಿ ಅವರಿಗೆ ಅಪಾರ ಆತ್ಮವಿಶ್ವಾಸ. 'ಸಂಯುಕ್ತಾ ಮೊದಲ ದಿನ ಶೂಟಿಂಗ್‌ಗೆ ಹೋದಾಗ ಆತಂಕದಿಂದ ಅವಳ ಹಿಂದೆಯೇ ಬಾಲದಂತೆ ಹೋಗಿದ್ದೆ. ನಾನು ಹಾಗೆ ಕೆಲಸವಿಲ್ಲದೇ ಸುಮ್ಮನೇ ಕುಳಿತಿರುವುದನ್ನು ನೋಡಿ, ಇದು ಅಮ್ಮನ ಸ್ವಭಾವ ಅಲ್ಲ ಎಂಬುದನ್ನು ಅರಿತ ಅವಳಿಗೇ ಬೇಸರವಾಯಿತು. ಅವಳೇ ನನ್ನೊಡನೆ ಮಾತನಾಡಿದಳು. ಅಮ್ಮ ನಾನು ಇದನ್ನೆಲ್ಲ ನಿರ್ವಹಿಸಬಲ್ಲೆ, ನೀನೇನೂ ಹೆದರಬೇಡ ಎನ್ನುತ್ತ ವಾಪಸ್ಸು ಕಾರಿನಲ್ಲಿ ಕಳುಹಿಸಿದಳು'' ಎನ್ನುವ ಅವರ ಮಾತುಗಳಲ್ಲಿ ಮಗಳ ಬಗ್ಗೆ ಹೆಮ್ಮೆ ವ್ಯಕ್ತವಾಗುತ್ತದೆ.

ಆದರೆ ಸುಧಾ–ಸಂಯುಕ್ತಾ ಅವರಂತೆ ಸ್ನೇಹಭಾವದಿಂದ ಇರುವ ಅಮ್ಮ–ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸುವುದಿಲ್ಲ. ಆ ಸ್ನೇಹಭಾವ ಅಷ್ಟು ಸರಳವೂ ಹೌದು. ಅನೇಕ ಅಮ್ಮಂದಿರು ತಮ್ಮ ಬಾಲ್ಯದಿಂದಲೂ ಆತಂಕಗಳನ್ನು ಹೊತ್ತುಕೊಂಡೇ ಬೆಳೆಯುತ್ತ, ಬದುಕು ಕಟ್ಟಿಕೊಂಡಿರುತ್ತಾರೆ. ಈ ಆತಂಕದ ಅನುಭವಗಳೇ ಅವರು ತಮ್ಮ ಮಕ್ಕಳ ಬಗ್ಗೆ ಹೆಚ್ಚು ಕಾಳಜಿಯಿಂದಿರಲು, ಬಿಗುವಾಗಿರಲು ಕಾರಣವಾಗುತ್ತದೆ. ಆ ಕಾರಣದಿಂದಲೇ, ಪ್ರಕೃತಿಯಲ್ಲಿ ನೀರು ಗಾಳಿ ಎಂಬುದು ಎಷ್ಟು ಸಹಜವೋ, 'ಅಮ್ಮ' ಎಂಬ ಜೀವವಿಶೇಷದ ಒಡಲಿನಲ್ಲಿ ತಳಮಳವೂ ಅಷ್ಟೇ ಸಹಜ ಎಂದು ಭಾವಿಸಬೇಕು.

ಹೆಣ್ಣುಮಕ್ಕಳು ತಮ್ಮ ದೈನಿಕದಲ್ಲಿ ಎದುರಿಸುವ ಅಸಹನೀಯ ಸಂಗತಿಗಳು ಒಂದೆರಡೇನೂ ಅಲ್ಲ. ಬಸ್ಸಿನಲ್ಲಿ ಹೋಗುವಾಗ ಯಾರೋ ಒಬ್ಬ ಧಸಕ್ಕನೆ ಅವಳ ಪ್ರೈವೆಸಿಯನ್ನು ದಾಟಿಬಿಡುತ್ತಾನೆ. ಹೋಟೆಲ್‌ನ ವಾಷ್ ಬೇಸಿನ್ ಬಳಿ ಯಾರೂ ಇಲ್ಲದ ಎರಡೇ ಕ್ಷಣಗಳಲ್ಲಿ ಅಹಿತ ಸ್ಪರ್ಶವೋ ಮಾತಿನ ಅನುಭವವೋ ಆಗಿಬಿಡುತ್ತದೆ. ನಸುಕಿನಲ್ಲಿ ಪ್ರಕೃತಿಯ ಸೌಂದರ್ಯವನ್ನು ಸವಿಯುತ್ತಾ ವಾಕ್ ಹೋಗುವಾಗ ಸರಕ್ಕನೇ ಸೈಕಲ್‌ನಲ್ಲಿ ಬಂದವ ಬೇಕೆಂದೇ ಡಿಕ್ಕಿಯಾಗಿ, ದೇಹಕ್ಕಿಂತಲೂ ಆಳವಾಗಿ ಮನಸ್ಸಿನ ಮೇಲೆ ಗಾಯ ಮಾಡಿಬಿಡುತ್ತಾನೆ. ಶಾಲೆಗೆ ಹೋಗುವಾಗ ಹೊಂಚು ಹಾಕುವವರಿದ್ದಾರೆ. ಮನೆಯೊಳಗೇ ಇರುವ, ಮಾವ, ಚಿಕ್ಕಪ್ಪ, ಅಷ್ಟೇ ಏಕೆ – ಅಪ್ಪನೇ ಕೊಡುವ ತೊಂದರೆಗಳು... ಒಂದೊಂದು ಮನೆಯಲ್ಲಿಯೂ ದಿನದಿನವೂ ಸೃಷ್ಟಿಯಾಗುವ ನೂರಾರು ಕತೆಗಳು. ತಾನು ಅನುಭವಿಸಿದ ನೋವು ಮಗಳನ್ನು ತಟ್ಟದೇ ಇರಲಿ ಎಂಬ ಕಾಳಜಿಯು ಅದೆಷ್ಟೋ ಶತಮಾನಗಳಿಂದ ಅಮ್ಮನ ಒಡಲಿನಲ್ಲಿ ನಿರಂತರ ತಳಮಳವನ್ನು ಸೃಷ್ಟಿಸಿ ಆಕೆಯ ಕರುಳಿನಲ್ಲಿ ತಳಮಳದ ಅಂಗವೇ ಸೃಷ್ಟಿಯಾಗಿದೆಯೇನೋ. ಕೆಲವೇ ಸೆಕೆಂಡುಗಳ ಅವನ ಉಡಾಫೆ ಮತ್ತು ವಿಕೃತಿಯ ಅಭಿವ್ಯಕ್ತಿ ಆಕೆಯಲ್ಲಿ ವಾರಗಟ್ಟಲೆ, ಕೆಲವೊಮ್ಮೆ ಜೀವನದುದ್ದಕ್ಕೂ ಕಹಿಯಾಗಿ ಉಳಿದುಬಿಡುತ್ತದೆ ಎಂಬುದು ಸುಳ್ಳಲ್ಲ. ಇಂತಹ ಘಟನೆಗಳಿಂದ ನೊಂದು ವೃತ್ತಿಯನ್ನು ಕೈಬಿಟ್ಟ, ಓದು ಮುಂದುವರಿಸುವುದನ್ನು ನಿಲ್ಲಿಸಿದ ಉದಾಹರಣೆಗಳನ್ನು ಅಮ್ಮಂದಿರು ಓದಿರುತ್ತಾರೆ, ಅಥವಾ ತಾವೇ ಅನುಭವಿಸಿರುತ್ತಾರೆ. ಇಂಥ ಅನುಭವಗಳ ಕಾರಣದಿಂದಲೇ – ಪ್ಯಾಡೆಡ್ ಬ್ರಾ 'ಅವನ' ಕೆಟ್ಟ ದೃಷ್ಟಿಯನ್ನು ಸೆಳೆದೀತು ಎಂದು ಅಮ್ಮನಿಗೆ ಅನ್ನಿಸುತ್ತದೆ. ಇನ್‌ಸ್ಟಾಗ್ರಾಮ್‌ನ ಚೆಲ್ಲು ಚೆಲ್ಲು ಪೋಸ್ಟ್‌ಗಳು ಯಾವ ಕೆಟ್ಟ ಕಣ್ಣುಗಳಿಗೆ ಆಹಾರವಾಗುತ್ತದೋ ಎನ್ನುವ ಭಯ ಕಾಡುತ್ತದೆ. ವಾಷ್ ಬೇಸಿನ್ ಬಳಿಯ ಮಬ್ಬುಗತ್ತಲನ್ನೇ ಬಿಡದ ದುಷ್ಟರು, ರಾತ್ರಿಯಲ್ಲಿ ಸುಮ್ಮನಿದ್ದಾರೆಯೇ ಎಂಬ ದುಗುಡ. ಇವೆಲ್ಲ ಸಂಗತಿಗಳನ್ನು ದೂರವಿರಿಸುವ ಕಾರಣಕ್ಕಾಗಿಯೇ ಅಮ್ಮ ಹೇಳುತ್ತಲೇ ಇರುತ್ತಾಳೆ – 'ಹುಶಾರು ಮಗಾ... ನೀನು ಜಾಗ್ರತೆಯಿಂದಿರು. ಏನೂ ಆಗಲ್ಲ.' ಅಮ್ಮನ ಇಂಥ ಮಾತುಗಳಲ್ಲಿ ಅಭಯವೂ ಇದೆ, ಅಸಹಾಯಕತೆಯೂ ಇದೆ.

ಬಹುತೇಕ ಸಂದರ್ಭಗಳಲ್ಲಿ ಅಮ್ಮನ ಕಾಳಜಿ ಮಗಳಿಗೆ ಅರ್ಥವಾಗುವುದು ಕಷ್ಟ. ಏಕೆಂದರೆ, ಹದಿಹರೆಯಕ್ಕೂ ಅಮ್ಮ ಹೇಳುವ ಜಾಗ್ರತೆಗೂ

> **ಈ ಜಗತ್ತಿನಲ್ಲಿ ಎಲ್ಲರೂ ಕೆಟ್ಟವರೇ ತುಂಬಿಲ್ಲ. ಒಳ್ಳೆಯವರ ನಡುವೆಯೇ ನಾವು ಹೀಗೆ ಬದುಕಿದ್ದೇವಲ್ಲ. ಹಾಗೆಯೇ ನಮ್ಮ ಮಕ್ಕಳಿಗೂ ಒಳ್ಳೆಯವರ ಸಹವಾಸ, ನೆರವು ದೊರೆಯುತ್ತದೆ. ಅವರನ್ನು ಒಳ್ಳೆಯವರನ್ನಾಗಿ ರೂಪಿಸುವ ಕರ್ತವ್ಯ ಪ್ರಜ್ಞೆಯೊಂದು ನಮ್ಮೊಳಗೆ ಇದ್ದರಾಯಿತು''**



ಸಂಯುಕ್ತಾ ಹೊರನಾಡು ಮತ್ತು ಸುಧಾ ಬೆಳವಾಡಿ

ಚಿತ್ರ: ಡಿ.ಸಿ. ನಾಗೇಶ್